ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 6–11–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ವಾಯು ಮಾಲಿನ್ಯ ನಿಯಂತ್ರಣ ಮಾಸಾಚರಣೆ ಅಂಗವಾಗಿ ಕಾಲ್ನಡಿಗೆ ಜಾಥಾ:<br><br>ಉದ್ಘಾಟನೆ:<br><br>ಶ್ರೀ ರಾಮಲಿಂಗಾ ರೆಡ್ಡಿ,<br>ಸಾರಿಗೆ ಸಚಿವರು | 07–11–2014<br>ಶುಕ್ರವಾರ<br>ಬೆಳಗ್ಗೆ<br>7–30 ಗಂಟೆಗೆ | ಫ್ರೀಡಂ ಪಾರ್ಕ್ (ಸ್ವಾತಂತ್ರ್ಯ ಉದ್ಯಾನವನ) ಶೇಷಾದ್ರಿ ರಸ್ತೆ, ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಒಂದು ದಿನದ ತರಬೇತಿ

ಬೆಂಗಳೂರು, ನವೆಂಬರ್ 6 (ಕರ್ನಾಟಕ ವಾರ್ತೆ)

ಮೈಸೂರು ತೋಟಗಾರಿಕಾ ಸಂಘವು ನವೆಂಬರ್ 15 ರಂದು ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 5.00 ಗಂಟೆವರೆಗೆ ಶ್ರೀ ಕಡೂರು ವಿಶ್ವನಾಥ್ ಅವರಿಂದ ಟೆರೇಸ್ ಗಾರ್ಡನಿಂಗ್ ಹಾಗೂ ಪೈಪ್ ಗಾರ್ಡನಿಂಗ್ ಕುರಿತ ಒಂದು ದಿನ ತರಬೇತಿಯನ್ನು ಡಾ. ಎಂ. ಹೆಚ್. ಮರೀಗೌಡ ಮೆಮೋರಿಯಲ್ ಹಾಲ್, ಲಾಲ್‌ಬಾಗ್, ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.

ಹೆಚ್ಚಿನ ಮಾಹಿತಿಗಾಗಿ ಕಾರ್ಯದರ್ಶಿ, ಮೈಸೂರು ತೋಟಗಾರಿಕಾ ಸಂಘ, ಲಾಲ್‌ಬಾಗ್, ಬೆಂಗಳೂರು – 560 004 ದೂರವಾಣಿ 080 – 26576781 ಅಥವಾ ಮೊಬೈಲ್ ಸಂಖ್ಯೆ: 9845803474/9986737142 ಮೂಲಕ ಸಂಪರ್ಕಿಸಬಹುದಾಗಿದೆ.

ಬಾಬು:ಜಿಪಿಆರ್

# ONE DAY FREE TRAINING CLASS

**Bangalore, Nov 6 (Karnataka Information)**

**The Mysore Horticultural Society is conducting One day free training class on Terrace gardening and Pipe gardening by Sri. Kadur Vishwanatha on 15th November 2014 from 2.00 PM to 5.00 PM at Dr. M.H. Marigowda Memorial Hall, Lalbagh, Bangalore.**

**For details contact the Secretary, Mysore Horticultural Society, Lalbagh, Bangalore – 560 004 (Phone: 080 26576781 or Mobile 9845803474/9986737142).**

**Babu/Gpr.**

# ಕನಕ ಜಯಂತ್ಯೋತ್ಸವ ಆಚರಣೆ

ಬೆಂಗಳೂರು, ನವೆಂಬರ್ 6 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು, ದೇವಸ್ತುತಿಯೇ ಮುಖ್ಯವೆನಿಸಿದ ಭಕ್ತಿ ಪರಂಪರೆಯ ಕಾಲದಲ್ಲಿ ತಮ್ಮ ವೈಚಾರಿಕ ಮತ್ತು ಪ್ರತಿಭಟನಾ ನೆಲೆಗಟ್ಟಿನಿಂದ ದಾಸ ಸಾಹಿತ್ಯಕ್ಕೆ, ತಮ್ಮೂಲಕ ಕನ್ನಡ ಸಾಹಿತ್ಯಕ್ಕೆ ವೈಚಾರಿಕ ಪ್ರಭೆಯನ್ನು ನೀಡಿದ ಸಂತ ಶ್ರೇಷ್ಠ ಕನಕದಾಸರ ಜಯಂತ್ಯೋತ್ಸವದ ಅಂಗವಾಗಿ ನವೆಂಬರ್ 8 ರಂದು ಇಡೀ ದಿನ ಬೆಂಗಳೂರಿನ ನಯನ ಹಾಗೂ ರವೀಂದ್ರ ಕಲಾಕ್ಷೇತ್ರದಲ್ಲಿ ರಾಜ್ಯಮಟ್ಟದ ಕನಕದಾಸರ ಜಯಂತ್ಯೋತ್ಸವ ಸಮಾರಂಭವನ್ನು ಏರ್ಪಡಿಸಲಾಗಿದೆ.

ಕನಕದಾಸರ ಜಯಂತ್ಯೋತ್ಸವ–2014 ರ ಅಂಗವಾಗಿ ಬೆಳಿಗ್ಗೆ 10.30 ಗಂಟೆಗೆ ಕನ್ನಡ ಭವನದ ನಯನ ಸಭಾಂಗಣದಲ್ಲಿ "ಕನಕದಾಸರು : ಭಿನ್ನ ನೆಲೆಗಳು" ಎಂಬ ವಿಷಯದ ಬಗ್ಗೆ ಡಾ. ಪಿ.ವಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ವಿಚಾರ ಸಂಕಿರಣವನ್ನು ಏರ್ಪಡಿಸಿದೆ. ಮಧ್ಯಾಹ್ನ 1–30 ಗಂಟೆಗೆ ಗಾಂಧಿನಗರದ ಕನಕದಾಸ ವೃತ್ತದಿಂದ "ಕನಕಕಲಾ ಯಾತ್ರೆ" ಸ್ಥಬ್ಧಚಿತ್ರ ಹಾಗೂ ಜಾನಪದ ಕಲಾತಂಡಗಳ ಮೆರವಣಿಗೆಯನ್ನು ಆನಂತರ

ಮಧ್ಯಾಹ್ನ 2.15 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಸಂತಕವಿ ಕನಕದಾಸರ ಸಾಕ್ಷ್ಯಚಿತ್ರ ಪ್ರದರ್ಶನ, ಕನಕದಾಸ ನಮನ–ನೃತ್ಯರೂಪಕ, ಯಕ್ಷಗಾನ–ನಳಚರಿತ್ರೆ ಹಾಗೂ ಹಿಂದೂಸ್ತಾನಿ ಸಂಗೀತ ಗಾಯನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಸಂಜೆ 6–00 ಗಂಟೆಗೆ ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ 'ಕನಕಶ್ರೀ ಪ್ರಶಸ್ತಿ' ಪ್ರದಾನ ಸಮಾರಂಭ ನಡೆಯಲಿದೆ. ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಶ್ರೀ ಅನಂತಕುಮಾರ್, ಸಾರಿಗೆ ಸಚಿವರ ಶ್ರೀ ರಾಮಲಿಂಗಾರೆಡ್ಡಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಹಾಪೌರರಾದ ಶ್ರೀಮತಿ ಶಾಂತಕುಮಾರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವೆ ಶ್ರೀಮತಿ ಉಮಾಶ್ರೀ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ಶಾಸಕ ಶ್ರೀ ಆರ್. ವಿ. ದೇವರಾಜು ಅಧ್ಯಕ್ಷತೆ ವಹಿಸಲಿದ್ದಾರೆ.

ಬಾಬು:ಜಿಪಿಆರ್.

## ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಸ್ಪರ್ಧೆಗಳು

ಬೆಂಗಳೂರು, ನವೆಂಬರ್ 6 (ಕರ್ನಾಟಕ ವಾರ್ತೆ)

ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಅಂಗವಾಗಿ ಹಂಪಿ ನಗರದಲ್ಲಿರುವ ನಗರ ಕೇಂದ್ರ ಗ್ರಂಥಾಲಯ ಪಶ್ಚಿಮ ವಲಯ ಕಚೇರಿಯು ವಿದ್ಯಾರ್ಥಿಗಳಿಗಾಗಿ ನವೆಂಬರ್ 12 ರಂದು 1 ರಿಂದ 4 ಮತ್ತು 5 ರಿಂದ 7 ನೇ ತರಗತಿವರೆತಿನ ವಿದ್ಯಾರ್ಥಿಗಳಿಗೆ ಚಿತ್ರ ಬಿಡಿಸುವ ಸ್ಪರ್ಧೆ. ನವೆಂಬರ್ 13 ರಂದು 8ನೇ ತರಗತಿಯಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧೆ ಮತ್ತು ನವೆಂಬರ್ 14 ರಂದು 8ನೇ ತರಗತಿಯಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ರಂಗೋಲಿ ಸ್ಪರ್ಧೆ ಏರ್ಪಡಿಸಿದೆ.

ಆಸಕ್ತ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಹಂಪಿ ನಗರ ಕೇಂದ್ರ ಗ್ರಂಥಾಲಯ ಅಥವಾ ದೂರವಾಣಿ ಸಂಖ್ಯೆ 080 – 23209691 ಸಂಪರ್ಕಿಸಲು ಕೋರಿದೆ.

ಬಾಬು:ಜಿಪಿಆರ್.